International Journal of Kannada Research 2024; 10(1): 25-28

International Journal of Kannada Research
www.kannadajournal.com

ISSN: 2454–5813
IJKR 2024; 10(1): 25-28
© 2024 IJKR
www.kannadajournal.com
Received: 22-11-2023
Accepted: 26-12-2023

**ಡಾ. ವ್ಹಿ.ಡಿ. ನಾಗನೂರಿ**
ಕನ್ನಡ ಪ್ರಾಧ್ಯಾಪಕರು,
ಎಸ್.ಎಸ್. ಕಲಾ ಹಾಗೂ,
ವಿಜ್ಞಾನ ಮಹಾವಿದ್ಯಾಲಯ,
ಸಂಕೇಶ್ವರ, ಕರ್ನಾಟಕ, ಭಾರತ

**Corresponding Author:**
**ಡಾ. ವ್ಹಿ.ಡಿ. ನಾಗನೂರಿ**
ಕನ್ನಡ ಪ್ರಾಧ್ಯಾಪಕರು,
ಎಸ್.ಎಸ್. ಕಲಾ ಹಾಗೂ,
ವಿಜ್ಞಾನ ಮಹಾವಿದ್ಯಾಲಯ,
ಸಂಕೇಶ್ವರ, ಕರ್ನಾಟಕ, ಭಾರತ

# ತರಾಸು ಬದುಕು ಬರಹ

**ಡಾ. ವ್ಹಿ.ಡಿ. ನಾಗನೂರಿ**

**ಪೀಠಿಕೆ**

ಸಾಹಿತ್ಯವನ್ನು ಪ್ರಬಲವಾಗಿ ಬರೆಯುವ ಬೆರಳೆನಿಕೆಯ ಮಹತ್ವದ ಬರಹಗಾರರಲ್ಲಿ ತಾರಸು ಅವರು ಒಬ್ಬರು. ಕನ್ನಡ ಸಾಹಿತ್ಯದಲ್ಲಿ 'ತರಾಸು' ಎಂದೇ ಪ್ರಸಿದ್ಧಿ ಪಡೆದುಕೊಂಡು ಕಾದಂಬರಿ ಕ್ಷೇತ್ರದಲ್ಲೇ ಮಹತ್ತರ ಸಾಧನೆ ಮಾಡಿದ ತರಿಕೇರಿ ತಳುಕು ರಾಮಸ್ವಾಮಯ್ಯ ಸುಬ್ಬರಾಮ ತೆಲಗು ಮಾತೃಭಾಷೆಯ ಪರಿಸರದಲ್ಲಿ ಹುಟ್ಟಿರುವ ಸಾಹಿತಿ. ಕನ್ನಡ ಸಾಹಿತ್ಯದಲ್ಲಿ ಅದರಲ್ಲಿಯೂ ಕಥೆ ಮತ್ತು ಕಾದಂಬರಿಗಳನ್ನು ಬರೆಯುವ ಅವರ ಹವ್ಯಾಸ ಶ್ಲಾಘನೀಯ. ನವ್ಯ ಮತ್ತು ಪ್ರಗತಿಶೀಲ ಸಾಹಿತ್ಯ ಚಳುವಳಿಯ ಕಾಲಘಟ್ಟದಲ್ಲಿ ಬಹಳಷ್ಟು ಪ್ರಖರವಾದ ಬರವಣಿಗೆಯನ್ನು ಹೊಂದಿರುವಂತಹ ಲೇಖಕ. ದುರ್ಗಾಸ್ತಮಾನ, ಮತ್ತು ರಕ್ತರಾತ್ರಿ ಎಂತಹ ಕಾದಂಬರಿಗಳಂತೂ ಸಾಹಿತ್ಯದ ಕ್ಷೇತ್ರದಲ್ಲಿ ಹೊಸ ಸಂಚಲನವನ್ನು ಉಂಟು ಮಾಡಿರುವಂತವು.

ಶೈಕ್ಷಣಿಕವಾಗಿ ಪ್ರಗತಿ ಹೊಂದಿರುವ ಕುಟುಂಬದಲ್ಲಿ, ತರಾಸು ಅವರು 21 ಏಪ್ರೀಲ್ 1920 ರಂದು ಹರಿಹರ ತಾಲೂಕಿನ ಮೇಲೆಬೆನ್ನೂರಿನಲ್ಲಿ ಜನ್ಮವನ್ನು ಪಡೆದಿದ್ದಾರೆ. ತಂದೆ ರಾಮಸ್ವಾಮಯ್ಯ ತಾಯಿ ಸೀತಮ್ಮಾ ಅವರ ಒಲುಮೆಯ ಕುಡಿಯಾಗಿ ಸುಬ್ಬರಾವ ಅವರು ಬಾಲ್ಯದಿಂದಲೇ ಬಹಳ ತುಂಟತನದ ಸ್ವಭಾವವನ್ನು ಹೊಂದಿದ್ದರು. ತರಾಸು ಅವರು ತಮ್ಮ ಶಿಕ್ಷಣವನ್ನೆಲ್ಲಾ ಚಿತ್ರದುರ್ಗದಲ್ಲಿ ಪೂರೈಸಿಕೊಳ್ಳುತ್ತಾರೆ. ಚಿಕ್ಕಪ್ಪ ತ.ಸು. ಶಾಮರಾವರು ಹಾಗೂ ದೊಡ್ಡಪ್ಪ, ಟಿ.ಎಸ್. ವೆಂಕಣ್ಣಯ್ಯ, ತಂದೆ ವಕೀಲ ವೃತ್ತಿಯಲ್ಲಿದ್ದರು. ಹೀಗಾಗಿ ಒಳ್ಳೆಯ ಸಾಹಿತ್ಯಿಕ ಪರಿಸರ ಪ್ರಭಾವ, ಪ್ರೇರಣೆ ಇವರಿಗಿತ್ತು. ಎಲ್ಲಕ್ಕಿಂತ ಮಿಗಿಲಾಗಿ ಸ್ವತಃ ಸುಬ್ಬರಾಯ ಅವರೇ ಹವ್ಯಾಸಿ ಓದುಗರಾಗಿ ನಮಗೆ ಕಂಡು ಬರುತ್ತಾರೆ. ರಕ್ತಸಂಬಂಧದಲ್ಲಿಯೇ ಅಂಬುಜಾ ಎಂಬುವರೊಂದಿಗೆ ವಿವಾಹವಾಗುತ್ತಾರೆ. ತರಾಸು ಅವರು ತಮ್ಮ ದಾಂಪತ್ಯದ ಜೀವನದಲ್ಲಿ ಮೂರು ಮಕ್ಕಳನ್ನು ಹೊಂದಿದ್ದಾರೆ. ನಾಗಪ್ರಸಾದ, ಪೂರ್ಣಿಮಾ, ಪ್ರದೀಪ. ಪ್ರಸ್ತುತವಾಗಿ ಮೈಸೂರಿನ ಯಾದವಗಿರಿಯಲ್ಲಿ ಗಿರಿಕನ್ಯಕಾ ಎಂಬ ಮನೆಯಲ್ಲಿ ಪತ್ನಿ ಮತ್ತು ಮಕ್ಕಳು ನೆಲೆನಿಂತಿದ್ದಾರೆ.

ತರಾಸು ವ್ಯಕ್ತಿತ್ವದ ಕುರಿತು ಹೇಳಬೇಕೆಂದರೆ ಹಟ, ಮತ್ತು ಛಲದಂತಹ ಗುಣಗಳನ್ನೇ ಹೊಂದಿರುವ ಪ್ರಬುದ್ಧ ಲೇಖಕ. ಒಂದು ದಿನ ಅವರ ದೊಡ್ಡಪ್ಪ ಟಿ.ಎಸ್. ವೆಂಕಣ್ಣಯ್ಯ ಅವರು ಬರವಣಿಗೆ ಅಷ್ಟು ಸರಳವಾದ ಕೆಲಸವಲ್ಲ ಎಂದಾಗ 'ಪುಟ್ಟನ ಚೆಂಡು' ಎನ್ನುವ ಕಥೆಯನ್ನು ಬರೆಯುವುದರ ಮೂಲಕ ಒಬ್ಬ ಬರಹಗಾರನಾಗಿ ಹೊರಹೊಮ್ಮುವುದಷ್ಟೇ ಅಲ್ಲದೇ ಅವರ ದೊಡ್ಡಪ್ಪನಿಗೆ ಅವರಲ್ಲಿ ಬರಹದ ಮೇಲೆ ಎಂತಹ ಒಂದು ವಿಶಿಷ್ಟ ಪ್ರತಿಭೆ ವಾತ್ಸಲ್ಯ ಆಸಕ್ತಿ, ಇದೆ ಎಂಬುದನ್ನು ಸಾಬೀತು ಪಡಿಸಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವುದರ ಮೂಲಕ ಸೆರೆಮನೆಯ ವಾಸವನ್ನು ಅನುಭವಿಸಬೇಕಾದ ಪ್ರಸಂಗ ಬರುತ್ತದೆ. ಸೆರೆಮನೆಯ ವಾಸದಲ್ಲಿದ್ದು ಕೊಂಡು ಅನೇಕ ಕಾದಂಬರಿಗಳನ್ನು ಬರೆಯುತ್ತಾರೆ.

ಸ್ವಾತಂತ್ರ್ಯ ಹೋರಾಟದ ಧ್ವಜ, ಸತ್ಯಾಗ್ರಹ, ಚಲೇಜಾವ ಚಳುವಳಿಯಂತಹವುಗಳಲ್ಲಿ ಭಾಗವಹಿಸಿ ಸೆರೆಮನೆಯ ವಾಸವನ್ನು ಅನುಭವಿಸಿದ ನಂತರದಲ್ಲಿ ತರಾಸು ಅವರು ತಿ.ತಾ. ಶರ್ಮ ಅವರೊಂದಿಗೆ 'ವಿಶ್ವ ಕರ್ನಾಟಕ' ಪತ್ರಿಕೆಯಲ್ಲಿ ವೃತ್ತಿಯನ್ನು ಆರಂಭಿಸುತ್ತಾರೆ. ತರಾಸು ಅವರು ಮೊದಲಿನಿಂದಲೇ ಕನ್ನಡದ ಪ್ರಸಿದ್ಧಿ ಪ್ರಗತಿಶೀಲ ಲೇಖಕರಾದ ಎ.ಎನ್. ಕೃಷ್ಣರಾವ್, ಹಾಗೂ ಅ.ನ.ಕೃ. ಅವರ ಪ್ರಭಾವಕ್ಕೆ ಒಳಗಾದವರು. ತರಾಸು ಅವರು 1944ರಲ್ಲಿ ಪ್ರಕಟಗೊಂಡ ಮೊಟ್ಟಮೊದಲ ಕಾದಂಬರಿ 'ಮನೆಗೆ ಬಂದ ಮಹಾಲಕ್ಷ್ಮೀ' ಹಂಸಗೀತೆ, ನಾಗರಹಾವು, ಬಿಡುಗಡೆಯ ಬೇಡಿ, ರಕ್ತಕ್ರಾಂತಿ, ತಿರುಗುಬಾಣದಂತಹ 68 ಕ್ಕೂ ಹೆಚ್ಚು ಪ್ರಸಿದ್ಧ ಕಾದಂಬರಿಗಳನ್ನು ಬರೆದು ಜನರ ಮನಸ್ಸನ್ನು ಸೂರೆಗೊಳಿಸಿದ ಅಪರೂಪದ ಲೇಖಕ. ಚಿತ್ರದುರ್ಗದ ಸಾಮಾಜಿಕ ಐತಿಹಾಸಿಕ ಕಥೆಗಳ ಪ್ರಭಾವವು

ಸಾಕಷ್ಟು ಅವರ ಬದುಕಿನ ಮೇಲಾದದ್ದು ವಿಶಿಷ್ಟವಾದದ್ದು. ಇದರಿಂದ ಅವರು ತಮ್ಮ ಜೀವನದಲ್ಲಿ ಸಾಮ್ರಾಟರೊನ್ನೊಳಗೊಂಡ ಅನೇಕ ಕಾದಂಬರಿಗಳು ಹುಟ್ಟಿಕೊಂಡಿವೆ. ಅವುಗಳಲ್ಲಿ ರಕ್ತಕ್ರಾಂತಿ ಸಿಡಿಲಮೊಗ್ಗು, ವಿಜಯೋತ್ಸವ ಇನ್ನೂ ಮುಂತಾದವುಗಳು.

ಕನ್ನಡ ಕಾದಂಬರಿಯ ಸಾರ್ವಭೌಮ ಹಾಗೂ ಪ್ರಗತಿಶೀಲ ಸಾಹಿತ್ಯ ಚಳುವಳಿಯ ಪ್ರವರ್ತಕರು ಆದ ಅ.ನ.ಕೃ. ಅವರ ಒಡನಾಟದಿಂದ ಇವರು ಇನ್ನೂ ಅನನ್ಯವಾಗಿ ಕಾದಂಬರಿಗಳನ್ನು ರಚಿಸುವಲ್ಲಿ ಬಹಳ ಪ್ರಮುಖ ಪ್ರಾತ್ರ ವಹಿಸುತ್ತವೆ. ಜೀವನದಲ್ಲಿ ಒಬ್ಬ ವಿಶಿಷ್ಟ ಗುರುವಾಗಿ ಅ.ನ.ಕೃ. ಅವರನ್ನು ಪಡೆದುಕೊಂಡ ಪ್ರಸಿದ್ಧ ಲೇಖಕ ತರಾಸು. ಮೈಸೂರು ಪುರಸಭೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಮೈಸೂರು, ವಿ.ವಿ. ಸೆನೆಟ್, ಸದಸ್ಯರಾಗಿ ಹಲವಾರು ಸಾಧನೆಗಳನ್ನು ಮಾಡಿದ್ದಾರೆ. ತಮ್ಮ 17 ನೇ ವಯಸ್ಸಿನಲ್ಲಿ ಸ್ವಾತಂತ್ರ್ಯ ಚಳುವಳಿಗಳಲ್ಲಿ ಭಾಗವಹಿಸಿ ದೇಶಭಕ್ತಿಗೀತೆಗಳನ್ನು ಹಾಡುವುದು, ಸ್ವಾತಂತ್ರ್ಯದ ಪರವಾಗಿ ಸ್ಫೂರ್ತಿದಾಯಕವಾಗಿ ಮಾತನಾಡುವ ಮೂಲಕ ತರುಣರ ಮೇಲೆ ದಟ್ಟವಾದ ಪ್ರಭಾವವನ್ನು ಬೀರಿದ್ದಾರೆ. ಬದುಕಿನಲ್ಲಿ ಅತ್ಯಂತ ಛಲವಂತನಾಗಿ ವ್ಯಕ್ತಿತ್ವವನ್ನು ರೂಪಿಸಿಕೊಂಡ ತರಾಸು ಅವರು ಬರಹದ ವಿಷಯದಲ್ಲಂತೂ ಅವಿರನ್ನು ಮೀರಿಸುವ ಬರಹಗಳೇ ಇಲ್ಲವೆನ್ನುವಷ್ಟು ಹರಿತವಾದ ಅಷ್ಟೇ ವರ್ಣನಾತ್ಮಕವಾಗಿ ಬರೆಯುವ ಅವರ ಶೈಲಿ ಅವರ್ಣನೀಯ. ಕನ್ನಡ ಸಾರಸ್ವತ ಲೋಕಕ್ಕಂತೂ ಎಷ್ಟೋ ಕೃತಿಗಳನ್ನು ಅರ್ಪಿಸಿದ್ದಾರೆ. ಅದರಲ್ಲಿ ಕನ್ನಡ ಚಲನಚಿತ್ರಗಳಾಗಿ ಹೆಸರು, ಕೀರ್ತಿ ಹಣವನ್ನು ಗಳಿಸಿಕೊಟ್ಟಿರುವ ಕೃತಿಗಳು ಹಲವು ಅವುಗಳಲ್ಲಿ ಚಂದ್ರವಳ್ಳಿಯ ತೋಟ, ನಾಗರ ಹಾವು, ಬೆಂಕಿಯ ಬಲೆ, ಗಾಳಿಮಾತು, ಚೆಂದನದ ಗೊಂಬೆ ಮಸಣದ ಹೂ ಮತ್ತು ಹಂಸಗೀತೆ ಕಾದಂಬರಿಯಂತೂ ಹಿಂದಿಯ ಸಿನಿಮಾ ಆಗಿ 1956 ರಲ್ಲಿ 'ಬಸಂತ ಬಿಹಾರ್' ಎಂಬ ಹೆಸರಿನಿಂದ ಬಿಡುಗಡೆಯಾಗಿ ಎರಡು ಭಾಷೆಗಳಲ್ಲಿ ಸದ್ದು ಮಾಡಿರುವ ಕಾದಂಬರಿ.

ಹೀಗೆ ಬರಹವೇ ತನ್ನ ಜೀವಾಳವನ್ನಾಗಿಸಿಕೊಂಡ ಕನ್ನಡದ ಒಬ್ಬ ಶ್ರೇಷ್ಟ ಹಾಗೂ ಸೃಜನಶೀಲ ವಿಚಾರವಂತ ಬರಹಗಾರ ತ.ರಾ.ಸು. ಅವರು ಅವರ ಎರಡು ಕಾದಂಬರಿಗಳನ್ನು ವಿಶ್ಲೇಷಿಸುವ ಪ್ರಯತ್ನವನ್ನು ಮಾಡುತ್ತೇನೆ. ಇಪ್ಪತ್ತನೇ ಶತಮಾನ ಅದರಲ್ಲಿಯೂ ಹೊಸಗನ್ನಡ ಸಾಹಿತ್ಯ ಪ್ರವರ್ಧನೆಯಾಗುತ್ತಿರುವ ಕಾಲಘಟ್ಟದಲ್ಲಿ ಸಮಾಜ, ಸಾಹಿತ್ಯದಲ್ಲಿ ಹಲವಾರು ಏರು, ಪೇರುಗಳನ್ನು ಅನುಭವಿಸುತ್ತಿರುವ ಸಾಮಾಹ. ಆ ಸಂದರ್ಭವೇ ಸಾಹಿತಿಗಳ ಸಾಹಿತ್ಯದ ಆಸಕ್ತಿಯ ವಿಚಾರಗಳು ಬರಹಗಳಾಗಿ ಪಡಿಮೂಡಿದ ಘಟ್ಟ. ನವ್ಯದ ನವೀರತೆಯೊಂದಿಗೆ ಐತಿಹಾಸಿಕ ವಿಚಾರಗಳನ್ನು ಅಷ್ಟೇ ರಸವತ್ತಾಗಿ ಕಾದಂಬರಿಗಳಲ್ಲಿ ಕಟ್ಟಿ ಕೊಟ್ಟಿರುವ ಉತ್ಕೃಷ್ಟ ಲೇಖಕ ತ.ರಾ.ಸು. ನಾನು ಅವರ ಮೊಟ್ಟ ಮೊದಲ ಕಾದಂಬರಿಯಾಗಿರುವ 'ಮನೆಗೆ ಬಂದ ಮಹಾಲಕ್ಷ್ಮೀ, ಹಾಗೂ ಐತಿಹಾಸಿಕ ಕಾದಂಬರಿಯಾಗಿ ಜನ ಮನ್ನಣೆ ಪಡೆದುಕೊಂಡಿರುವ ಹಾಗೂ ಸ್ವತಃ ಅವರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಿರುವ ಹಾಗಿರುವ ಒಂದು ವಿಶಿಷ್ಟ ಕಾದಂಬರಿ ಸಿಡಿಲಮೊಗ್ಗು ಎರಡು ಕಾದಂಬರಿಗಳ ಚರ್ಚೆಗೆ ನನ್ನ ಓದಿನ ಸೀಮಿತತೆಯನ್ನು ಹೊಂದಿರುತ್ತೇನೆ.

"ಮನೆಗೆ ಬಂದ ಮಹಾಲಕ್ಷ್ಮೀ" 1944 ರಲ್ಲಿ ಪ್ರಕಟಗೊಂಡ ಅವರ ಮೊಟ್ಟಮೊದಲ ಕಾದಂಬರಿ. ಅವರ ಕಾದಂಬರಿ ರಚನಾ ಶೈಲಿಯಂತೂ ನವ್ಯದಂತೆ ನವೀರಾದದ್ದು. ಭಾಷೆಯಲ್ಲಿ ಎಳೆಯತನವಿದೆ, ರೋಷ, ಆವೇಶ, ಆರ್ಭಟದಷ್ಟೇ, ಮುಗ್ಧತೆ, ಸರಳತೆ, ಸೌಜನ್ಯ, ಮಾನವೀಯತೆಯ ವಿಶಿಷ್ಟ ಲಕ್ಷಣಗಳನ್ನು ಹೊಂದಿವೆ. ಬದುಕಿನಲ್ಲಿ ಸುಖಕ್ಕಿಂತ ಹೆಚ್ಚು ಕಷ್ಟಗಳನ್ನೇ ಅನುಭವಿಸಿದ ಅವರು ಯಾವಾಗಲೂ ಸಮಾಜ, ದೇಶದ ಕುರಿತಾದ ಪ್ರಗತಿಪರ ಧೋರಣೆಗಳನ್ನು ಹೊಂದುವುದರೊಂದಿಗೆ ಕಾದಂಬರಿಗಳನ್ನು ಕಟ್ಟಿಕೊಟ್ಟಿದ್ದಾರೆ. "ಪ್ರತಿಕ್ರೋದ್ಯಮದ ಕಾಡ ಅಲೆತದಲ್ಲಿ ಹೇಗೋ ಹರಿಯುತ್ತಿದ್ದ ನನ್ನ ಬರಹಗಾರನ ಬುದ್ಧಿಗೆ ಒಂದು ಸಾಮಾಜಿಕ ಕ್ರಾಂತಿಯ ಗುರಿಯನ್ನು ತೋರಿಸಿಕೊಟ್ಟು, ಕಾದಂಬರಿಕಾರನಾಗಲು ಬೆನ್ನು ತಟ್ಟಿ ಸ್ಫೂರ್ತಿ ನೀಡಿದ ಹಿರಿಯ ಜೀವ ಅ.ನ.ಕೃ." ತ.ರಾ.ಸು. ಅತ್ಯುತ್ತಮ ಬರಹಗಾರರಾಗುವುದರೊಂದಿಗೆ ಉತ್ತಮ ವಾಗ್ಮಿಗಳೂ ಆಗಿದ್ದಾರೆ. ಕರ್ನಾಟಕ, ಸಂಸ್ಕೃತಿ, ಪರಂಪರೆ, ಇತಿಹಾಸ, ಸಾಹಿತ್ಯ, ದೇಶ ವೈಚಾರಿಕತೆಯ ಕುರಿತು ಸದಾ ಸ್ಫುಟವಾಗಿ ಮಾತನಾಡತಕ್ಕಂತಹ ವ್ಯಕ್ತಿತ್ವ ತ.ರಾ.ಸು. ಅವರದ್ದು.

ಮನೆಗೆ ಬಂದ ಮಹಾಲಕ್ಷ್ಮೀ ಕಾದಂಬರಿಯನ್ನು ಬರೆಯುವಾಗ ಒಬ್ಬ ಶ್ರೇಷ್ಟ ಕಥೆಗಾರನಾಗಿ ಕಲೆಗಾರನಾಗಿಯೂ ಕಂಡು ಬರುತ್ತಾರೆ. ತಮ್ಮ ಬರವಣಿಗೆಯ ಮೋಲಕ ಪಾತ್ರಗಳಿಗೆ ಜೀವ ತುಂಬುವ ಅವರ ಕಲಾಕುಸರಿಯಂತೂ ಅದ್ಭುತ. ಕಾದಂಬರಿಯಲ್ಲಿ ಬರುವ ಸೋಮಯ್ಯನ ಪಾತ್ರ ಉದಾರತೆ, ತ್ಯಾಗ, ಹೃದಯವಂತಿಕೆಯನ್ನು ಹೊಂದಿರುವ ವ್ಯಕ್ತಿ. ಹಳ್ಳಿಯಲ್ಲಿದ್ದರು, ಸಂಸ್ಕಾರಕ್ಕೆ ಯಾವದೇ ಕೊರತೆ ಇಲ್ಲದಿರುವ ಪಾತ್ರ.

ಕಾದಂಬರಿಯ ಪ್ರಾರಂಭದ ಸಾಂದರ್ಭದಲ್ಲೂ ದೇವತಾ ಸ್ತುತಿ, ಪರಿಸರಗಳನ್ನು ವರ್ಣಿಸುವ ಅವರ ಶೈಲಿ ಮೆಚ್ಚುವಂತಹದ್ದು. ಕಾದಂಬರಿ ನಡೆಯುವ ಊರು ಸಾರಾಪುರ. ಸಾರಾಪುರ ಊರಿನ ಹೆಸರು ಬಂದ ಪರಿ ಹೇಗೆ ಅದರ ಐತಿಹ್ಯಗಳನ್ನು ಎಳೆ ಎಳೆಯಾಗಿ ಬಿಚ್ಚುತ್ತಾ ಹೋಗುತ್ತಾರೆ. 'ಇಂದು ಕೇವಲ ಸುರಾಪುರವೆಂಬ ಏಕೈಕ ನಾಮದಿಂದ ಕರೆಯಲ್ಪಡುತ್ತಿರುವ ಈ ಕುಗ್ರಾಮ, ಅತ್ಯಂತ ಪ್ರಾಚೀನ ಕಾಲದಿಂದಲೂ ಸೂರ್ಯ ಭಗವಾನನಿಗೆ ಅತ್ಯಂತ ಪ್ರಿಯವಾದ ಸ್ಥಳವಾಗಿತ್ತಂತೆ". ಕಾದಂಬರಿಯಲ್ಲಿ ಬರುವ ಹಿಂದೂ, ಮುಸ್ಲಿಂ ಜಾತಿಗಳಲ್ಲಿಯೂ ಇರುವ ಬಾಂಧವ್ಯತೆಯನ್ನು ಕೂಡಾ ಸ್ಪಷ್ಟವಾಗಿ ಚಿತ್ರಿಸಿದ್ದಾರೆ.

ಕಾದಂಬರಿಯ ಪ್ರಾರಂಭದಲ್ಲಿ ದೀರ್ಘ ಪ್ರಸ್ತಾವಣೆ ಇರುವಂತಹ ಕಾದಂಬರಿಗಳು ಅಪರೂಪ. ಪೀಟಿಕಾ ಭಾಗದ ನಂತರದಲ್ಲಿ ಇರುವಂತಹ 'ಶಂಕರಯ್ಯನ ಮನೆ' ಭಾಗದಲ್ಲಿ ಬರುವ ಶಂಕರಯ್ಯನ ಪಾತ್ರ ಆತನ ಕುಟುಂಬ ರೈತಾಪಿ ಕುಟುಂಬವಿದ್ದರೂ ಅವರ ಜೀವನದ ಸೊಗಸು ಸೊಬಗು, ಮನೋಹರವಾಗಿರುವಂತಹದ್ದು. ಇನ್ನೊಂದ ಕಡೆ ಅಮಲ್ದಾರ್ ಮಹಾದೇವ ಶಾಸ್ತ್ರಗಳು ಅವರ ಕುಟುಂಬವನ್ನು ತರಾಸು ಅವರು ಬಹಳ ಸುಂದರವಾಗಿ ಅನಾವರಣಗೊಳಿಸಿದ್ದಾರೆ. ಮಹಾದೇವಶಾಸ್ತ್ರಗಳು ಅವರ ಹೆಂಡತಿ ಶ್ರೀಮಂತಿಕೆಯ ಅಹಂನಲ್ಲಿ ಗಿರಿಕಿ ಹೊಡೆಯುತ್ತಿರುವುದನ್ನು ಇಲ್ಲಿ ಎತ್ತಿ ತೋರಿಸುತ್ತಾರೆ. "ಅರಗಿಣಿನ ತಗೊಂಡು ಹೋಗಿ ಕಬ್ಬಕ್ಕಿ ಬಾಯಲ್ಲಿಡೋಕೂ ಸಿದ್ದರಾಗಬೇಕು" ಎಂದ ಅನ್ನಪೂರ್ಣಮ್ಮನ ಮಾತು ಅವರ ಮನೆನೋಡಲು ಬಂದ ಅಚ್ಚಿತಮ್ಮನ ಮೊದಲ ತುತ್ತಿಗೆ ನೊಣ ಸಿಕ್ಕಂತೆ ಅನುಭವಾಯಿತು ಎಂಬ ಗಾದೆ ಮಾತುಗಳನ್ನು ಬಳಸುವ ಪರಿಯಂತೂ ಅತ್ಯುತ್ತಮ.

ಶಂಕರನ ತಂದೆ ಸೋಮಯ್ಯ, ಹಾಗೂ ಮಹಾದೇವಶಾಸ್ತ್ರೀಗಳ ಮಧ್ಯೆ ಇರುವ ಸ್ನೇಹ ಸಂಬಂಧ ಅದು ಮುಂದೆ ಹೋಗಿ ಬೀಗತನದ ಸುಂಬಂಧವಾಗಿ ಬದಲಾಗುವ ಪರಿ ಅಲ್ಲಿ ವರ್ಗಗಳು ಅಮುಖ್ಯವಾಗಿ ಬಿಡುತ್ತವೆ, ಪ್ರೀತಿ, ಸ್ನೇಹ ವಾತ್ಸಲ್ಯ ಮರ್ಯಾದೆಯಂತಹ ಗುಣಗಳಿಂದ ಕಾದಂಬರಿ ಓದುಗರ ಮನಸ್ಸಿಗೆ ನಾಟುತ್ತದೆ. ಜೊತೆಗೆ ಮಹಾದೇವಶಾಸ್ತ್ರೀಗಳು, ಓದಿಕೊಂಡು ಸರಕಾರಿ ಸೌಕರಿಯಲ್ಲಿದ್ದರೂ, ಇದ್ದ ಒಬ್ಬ ಮಗಳನ್ನು ಒಬ್ಬ ಶ್ರೇಷ್ಟ ಸುಸಂಸ್ಕೃತ ಮನೆತನವಂತರಾದ ಸೋಮಯ್ಯನ ಮಗನಿಗೆ ಮಗಳನ್ನು ಕೊಡುವ ನಿರ್ಧಾರವನ್ನು ಕೈಗೊಳ್ಳವಲ್ಲಿಯೂ ಸಹ ತ.ರಾ.ಸು. ಅವರು ಮನುಷ್ಯ, ಗೌರವಕ್ಕೆ ಪ್ರಧ್ಯಾನತೆಯನ್ನು ನೀಡಿದ್ದಾರೆ.

ಸೋಮಯ್ಯನ ಹೆಂಡತಿ ಅಚ್ಚಿತಮ್ಮನಂತೂ ಹಳ್ಳಿಯಲ್ಲಿ ದುಡಿದು ತಿನ್ನುವ ಪಾತ್ರವಾದರೂ ಸ್ವಾಭಿಮಾನಕ್ಕೆ ಯಾವ ಕುಂದು ಇಲ್ಲದಂತೆ ತನ್ನ ವ್ಯಕ್ತಿತ್ವವನ್ನು ಹೊಂದಿರುವಂತೆ ಪಾತ್ರವನ್ನು ಹೆಣೆಯುವಲ್ಲಿ ತ.ರಾ.ಸು. ಅವರು ಎತ್ತಿದ ಕೈ ಕುಲನೋಡಿ ಹೆಣ್ಣು ತರಬೇಕು, ಬಲ ನೋಡಿ ನೆಲ ತೋಡಬೇಕು, ಕಂಡೂ ಕಾಣದ ಕಡೆಯ ಸಂಬಂಧ ಕೋಟಿ ವರಹ ಕೊಟ್ಟರೂ ನಮಗೆ ಬೇಡ''. ಈ ರೀತಿ ನುಡಿಯಲ್ಲಿ ಅವಳಲ್ಲಿರುವ ಗೌರವ ಘನತೆಗಳು, ತುಳುಕುತ್ತವೆ. ತಾಯಿಯಂತೆ ಮಗಳೂ ನೂಲಿನಂತೆ ಸೀರೆ ಎಂದ ಹಾಗೆ ಅವರ ಇರ್ವರು ಮಕ್ಕಳಾದ ಶಂಕರಯ್ಯ ಹಾಗೂ ಛಾಯಾ ಇಬ್ಬರೂ ತನ್ನ ತಾಯಿ–ತಂದೆಗಳಂತೆ ಮರ್ಯಾದೆಯನ್ನು ತಮ್ಮ ಜೀವನದ ಉಸಿರಿನಂತೆ ಬದುಕಿದ್ದವರು. ತಂದೆಯ ಮನಸ್ಸಿನಲ್ಲಿ ಕವಿದ ಕಾರ್ಮೋಡದ ಹೊಗೆಯನ್ನು ಛಾಯಾ ಮೊದಲೇ ಅರಿತುಕೊಂಡಿದ್ದಳು. ತಂದೆಯನ್ನು ದುಃಖಿಸದೇ ಶಾಂತವಾಗಿರಲೂ ಸೂಚಿಸಿದಳು. ಆದರೆ ಸೋಮಯ್ಯ ತನ್ನ ಮನದ ಕೆಟ್ಟ ವಿಚಾರವನ್ನು ಮಗಳಿಗೆ, ಅವಳ ಒತ್ತಾಯದ ಮೇಲೆ ತಿಳಿಸಿ, ಕೊಣೆಗೆ ಅವಳಿಂದ ಮಾತು ತೆಗೆದುಕೊಳ್ಳುತ್ತಾನೆ. ಹೆಂಗಸರ ಬಾಯಲ್ಲಿ ಯಾವ ಮಾತೂ ಗುಟ್ಟಾಗಿ ನಿಲ್ಲಬಾರದೂಂತ ಧರ್ಮರಾಯ ಶಾಪಕೊಟ್ಟ' ವಿಚಾರವನ್ನು ತನ್ನ ಮಗಳು ಛಾಯಾಗೆ ತಿಳಿಸುತ್ತಾನೆ.

ಇಲ್ಲಿ ಮತ್ತೊಂದು ವಿಚಾರವನ್ನು ನಾವು ಚರ್ಚಿಸುವುದಾದರೆ ಹೆಣ್ಣು ಋತುಮತಿಯಾಗುವುದು ಪ್ರಕೃತಿಯ ಒಂದು ಸಹಜ ಗುಣ ಆದರೆ, ತ.ರಾ.ಸು. ನವ್ಯ ಕಾಲಘಟ್ಟದಲ್ಲಿದ್ದುಕೊಂಡು, ಹೆಣ್ಣು ಋತುಮತಿಯಾಗುವ ಸಮಯದಲ್ಲೂ ದಿನ, ನಕ್ಷತ್ರ, ತಿಥಿಗಳನ್ನು ಗುರುತಿಸಿ ಅದರ ಮೇಲಿಂದ ಒಳ್ಳೆಯ ಲಕ್ಷಣ, ಕೆಟ್ಟ ಲಕ್ಷಣ ಅಂತ ಅವುಗಳನ್ನು ಲೆಕ್ಕಿಸುವುದು ಎಷ್ಟು ಸೂಕ್ತ. ಕಾದಂಬರಿಯಲ್ಲಿ ಮೌಢ್ಯತೆಯೂ ಸಮಾಜದ ಸುತ್ತಲೂ ಪಸರಿಸುವುದು ಕಂಡು ಬರುತ್ತದೆ. ಸರೋಜಾ ಋತುಮತಿಯಾದ ಘಳಿಗೆಯನ್ನು ಶಪಿಸುವುದು, ಅವಳ ಮನೆಗೆ ಒಂದು ಅನಿಷ್ಟವಾಗಿ ಬರುತ್ತಾಳೆ ಎಂದು ಚಿಂತಿಸುವುದು ಹಾಗೂ ಅದರಿಂದ ಏನಾದರೂ ಕೆಡಕೂ ಉಂಟಾಗಬಹುದು ಎಂಬ ಕುರಿತು ಸೋಮಯ್ಯಾ ಮನಸ್ಸಿನೊಳಗೆ, ಕೊರಗಿ ಕೊರಗಿ ಆ ವಿಚಾರದ ಕುರಿತು ಚಿಂತೆಯಲ್ಲಿ ಮುಳುಗುತ್ತಾನೆ ಎಂಬುದನ್ನು ತರಾಸು ಆಗಿನ ಜನ ಇನ್ನೂ ಜಡತ್ವದಲ್ಲಿ, ಕಂದಾಚಾರಗಳಲ್ಲಿ ಮುಳುಗಿರುವಂತೆ ತೋರಿಸುತ್ತಾರೆ.

ಛಾಯಾಳ ಪಾತ್ರದ ಕುರಿತಾಗಿ ಕಾದಂಬರಿಕಾರ 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ಎಂಬುದನ್ನು ಅಲ್ಲಿ ಬಿಂಬಿಸಿರುವುದು, ಅಂದಿನ ಸಮಾಜದ ಧೋರಣೆಗಳು ಹೆಣ್ಣಿನ ಸುತ್ತ ಹೇಗೆ ಸರಪಳಿಗಳಾಗಿದ್ದವು ಎಂಬುದರ ಬಗ್ಗೆ ಹಾಗೂ ಹೆಣ್ಣಿಗೆ ಹೆಣ್ಣೆ ಶತ್ರು ಎಂಬುದನ್ನು ಪಾತ್ರಗಳಾದ, ಅನ್ನಪೂರ್ಣ, ಅಚ್ಚಿತಮ್ಮ, ಸರೋಜಾ ಇವುಗಳಲ್ಲಿ ವ್ಯಕ್ತಿಗೊಳಿಸಿದ ಪರಿಯು ಸುಂದರವಾಗಿದೆ. ಒಟ್ಟಿನಲ್ಲಿ ಹೇಳಬೇಕೆಂದರೆ ಶುಕ್ರವಾರದ ದಿನ ಸೋಮಯ್ಯನ ಮನೆಗೆ ಬಂದ ಸರೋಜಾಳ ಮದುವೆಯ ಪ್ರಸ್ತಾಪ ಅವಳ ಜೀವನಕ್ಕೆ ಯಾವುದೇ ರೀತಿಯ ಶುಭವಿಲ್ಲ. ಪಂಚಾಂಗದ ವಾರ, ತಿಥಿ, ನಕ್ಷತ್ರ, ನಂಬಿಕೆಗಳೆಲ್ಲಾ ಸುಳ್ಳು ಎಂಬುದರ ಕಡೆಗೆ ಲೇಖಕರು ಲಕ್ಷವಹಿಸಿದ್ದಾರೆ.

ಇನ್ನು ಮತ್ತೊಂದು ಕಾದಂಬರಿಯ ಕುರಿತು ಪ್ರಸ್ತಾಪಿಸಬೇಕೆಂದರೆ 'ಸಿಡಿಲ ಮೊಗ್ಗು' ಇದೊಂದು ಐತಿಹಾಸಿಕ ಕಾದಂಬರಿ. ಹೊಯ್ಸಳರ ಪ್ರಸಿದ್ಧ ಸಾಮ್ರಾಟ ವಿಷ್ಣುವರ್ಧನ ಮತ್ತು ಆತನ ತಂದೆ ಎರೆಯಂಗದೇವ ಚಾಲುಕ್ಯರ ವಿಕ್ರಮಾಧಿತ್ಯನ ಸಾಮಂತರಾಗಿದ್ದ ಕಾಲದ ಘಟನಾವಳಿಗಳ ಚಿತ್ರಣವನ್ನು ಹೊಂದಿದೆ. ಕಾದಂಬರಿಯೂ ಹೊಯ್ಸಳರು ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುತ್ತಾ ಚಕ್ರಾಧಿಪತ್ಯವನ್ನು ಸ್ಥಾಪಿಸಲು ಅಡಿಗಲ್ಲು ಎಂಬಂತಹ ಘಟನೆಗಳನ್ನು ಕಾದಂಬರಿಯ ಸುತ್ತಲೂ ಬಿತ್ತರಿಸಿದ್ದಾರೆ.

ಪರಂಪರಾಗತವಾಗಿ ಚಾಲುಕ್ಯರಿಗೆ ಬದ್ಧರಾದ ಹೊಯ್ಸಳರು ಮತ್ತು ಸಾಮಂತರ ರಾಜರುಗಳಲ್ಲಿ ಅಸೂಯೆ ಮಾತ್ಸರ್ಯದ ಭಾವವನ್ನು ಒಂದು ಕಡೆ ನಾವು ನೋಡಿದರೆ, ಇನ್ನೊಂದು ಕಡೆ ವಿಕ್ರಮಾಧಿತ್ಯನ ಒಡ್ಡೋಲಗದಲ್ಲಿ ನಡೆದ ಒಂದು ಘಟನೆಯಿಂದ ಕಾದಂಬರಿ ಇನಷ್ಟು ಪ್ರಬಲವಾಗಿ ಹುಟ್ಟಿಕೊಳ್ಳುತ್ತದೆ. ಹೊಯ್ಸಳರ ರಾಜನಾದ ವಿಷ್ಣುವರ್ಧನನ ಛಲಗಾರಿಕೆ, ಹಾಗೂ ನಾಗರಹಾವು ಕಾದಂಬರಿಯಲ್ಲಿ ಬರುವ ವಿಷ್ಣುವರ್ಧನ ಪಾತ್ರ ಹಾಗೂ ಸ್ವತಃ ತರಾಸು ಅವರ ವ್ಯಕ್ತಿತ್ವ ಇಲ್ಲಿ ಮೆಳೈಸಿಕೊಂಡದ್ದನ್ನು ಕಾಣಬಹುದಾಗಿದೆ.

ಕಾದಂಬರಿಯ ಪ್ರಾರಂಭದಲ್ಲಿ ಬುರವ ಬಳ್ಳಿಗಾಮೆಯ ಪ್ರಕೃತಿಯ ವನಸಿರಿಯ ಕುರಿತು ಬಹಳ ಸುಂದರವಾಗಿ ಬರೆಯುತ್ತಾ ಹೋಗಿದ್ದಾರೆ. ಕಥೆಯ ಮುಖ್ಯ ಪಾತ್ರ ಹೋಯ್ಸಳರ ಎರೆಯಂಗದೇವ, ಆತನ ಮೂರನೇ ಮಡದಿ ಏಚಲಾದೇವಿ ಎರಡೂ ಪಾತ್ರಗಳೂ ಹೃದಯಂಗಮಯವಾಗಿ ಮೂಡಿವೆ. ರಾಣಿ ಏಚಲಾದೇವಿಯಂತೂ ಮುಗ್ಧತೆಗೆ ಇನ್ನೊಂದು ಹೆಸರೇ ಏಚಲೇ, ಅವಳಲ್ಲಿ ಅಳವಟ್ಟಿರುವ ಸಂಸ್ಕಾರದ ಗುಣಗಳು, ಕಾದಂಬರಿಯನ್ನು ಶೋಭಾಮಯನಗೊಳಿಸಿವೆ. ದೇವರು ಋಷಿಗಳ ಕುರಿತು ಇರುವ ನಂಬಿಕೆಗಳು, ಆಚರಣೆಗಳನ್ನು ತರಾಸು ಬಹಳ ನವಿರಾಗಿ ಹೆಣೆದಿರುವುದು ಕಂಡು ಬರುತ್ತದೆ. ಎರೆಯುಗದೇವನ ತಾಯಿ, ಏಚಲೇ ವ್ಯಕ್ತಿತ್ವಗಳೂ ಸಂಪೂರ್ಣ ಸಂಪ್ರದಾಯತೆಯಿಂದ ಕೊಡದವುಗಳಾಗಿವೆ. ವಿನಯಾಧಿತ್ಯ, ಮಾರಸಿಂಗಯ್ಯನ ಪಾತ್ರಗಳೂ ಕಾದಂಬರಿಯಲ್ಲಿ ಪೂರಕ ಪಾತ್ರಗಳಾಗಿ ತನ್ನ ಗಾಂಭಿರ್ಯವನ್ನು ಉಳಿಸಿಕೊಂಡಿವೆ. ಕಾದಂಬರಿ ಒಂದು ನಂಬಿಕೆಯ ಆಧಾರವಾಗಿಟ್ಟಕೊಂಡು ಪ್ರಾರಂಭವಾಗುತ್ತದೆ. ಅದೇನೆಂದರೆ, ಬಳಿಗ್ಗಾಮೆಯ ಬೆಟ್ಟದ ಗುಹಾದೇವರ ದರ್ಶನಕ್ಕೆ ಹೋಗುವ ನಂಬಿಕೆ. ದೇವತಾ ದರ್ಶನ, ಮತ್ತೊಂದು ಚಾಲುಕ್ಯರ ದೊರೆ ವಿಕ್ರಮಾಧಿತ್ಯ ಚೌತಣ್ಯಕ್ಕೆ ಎರಡು ವಿಚಾರಗಳ ಸುತ್ತ ಕಥೆ ರಚನೆಯಾಗುತ್ತ ಹೋಗುತ್ತವೆ. ಕಾದಂಬರಿಯ ನಡುವೆ ಬರುವ ಕಾಡು ಕಾಡಿನ ಕುರಿತು ವಿಷ್ಣುವರ್ಧನನಲ್ಲಿರುವ ಕೂತುಹಲ, ಏಚಲೇಗೆ ಇರುವ ಭಯ, ಎರೆಯಂಗ ದೇವನ ಸರಸ, ರಾಜನ ಗಾಂಭಿರ್ಯ ಪರಾಕ್ರಮದ ಗುಣಗಳನ್ನು ಇಲ್ಲಿ ಕಾಣಬಹುದಾಗಿದೆ. ಐತಿಹಾಸಿಕ ಕಾದಂಬರಿಯಾದರೂ ಕಾದಂಬರಿಯಲ್ಲಿ ಒಳಗಿರುವ ಹೋರಣ, ಗಾದೆ ಮಾತುಗಳು, ಅಪ್ಪಕೊಟ್ಟ ಪಟ್ಟೇ ಪೀತಾಂಬರಕ್ಕಿಂತ ಮಾವಕೊಟ್ಟ ನೋಲೇ ಹಿರಿದು. ಹಾಲೇನು ಸೊದೆಯನ್ನು ಕರೆಯುತ್ತೇನೆ, ವಿನಾಶ ಕಾಲಕ್ಕೆ ವೀಪರೀತ ಬುದ್ಧಿ. ಇಂತಹ ಅದ್ಭುತವಾಗಿವೆ..

ನಿಸರ್ಗದ ಆಸ್ವಾದವನ್ನು ಸವೆಯುವ ಬಿಟ್ಟಿಯಣ್ಣ, ಹೂದೋಟದಲ್ಲಿ ಕುಸುಮಗಳೊಂದಿಗೆ ಶಾಂತಲೆಯ ಸಂವಾದದ ಪರಿ, ದೇವತೋಪಾಸನೆಯ ಕುರಿತು ನಡೆಯುವ ಚರ್ಚೆ, ಕಾದಂಬರಿಯ ಸೌಂದರ್ಯವನ್ನು ಇಮ್ಮಡಿಗೊಳಿಸಿವೆ. ಅಂತೆಯೇ ವಿಕ್ರಮಾಧಿತ್ಯನ ದಂಡನಾಯಕ ಹೆಗ್ಗಡೆಯವರು ಔದಾರ್ಯದ ಗುಣ ಜೊತೆಗೆ, ಆತನ ಮಡದಿ ಮಾಚಿಕಬ್ಬೆಯಂತೂ ಭಕ್ತಿ ಮತ್ತು ಮಾನವಿಯ ಅಂತಕರಣದ ಮಿಡಿತದ ಗುಣಗಳಿಂದ ತುಂಬಿದ ಪಾತ್ರ.

ಕಾದಂಬರಿಯಲ್ಲಿ ಬರುವ ಶಾಂತಲೆಯ ಪಾತ್ರ, ಹೆಗ್ಗಡೆಯ ಮಗಳಾದರೂ ಅವಳಲ್ಲಿರುವ ಛಲವಂತಿಕೆ ಸ್ವಾಭಿಮಾನದ ಗುಣದಿಂದ ನೋಡಲಂತೂ ಸುಂದರ ಹೆಣ್ಣಾದರೂ ಎಲ್ಲ ಗುಣಗಳಿಂದ ಮತ್ತಷ್ಟು ಸುಂದರವಾಗಿ ಕಂಡಿದ್ದಾಳೆ. ಮತ್ತು ಬಳ್ಳಿಗಾಮೆಯ ಮಡಿಲಲ್ಲಿ ವಿಷ್ಣುವರ್ಧನನ ಮತ್ತು ಶಾಂತಲೆಯ ಮನದ ಪ್ರೀತಿಯ ಅಂಕುರತೆಯಂತೂ ರಮಣೀಯವಾದದ್ದೂ.

ಕಾಳಿದಾಸಯ್ಯನ ಕುಹಕ ಬುದ್ಧಿ ಎಲ್ಲೊ ವಿಕ್ರಮಾಧಿತ್ಯನ ವ್ಯಕ್ತಿತ್ವವನ್ನು ಘಾಸಿಗೊಳಿಸಿದ ರೀತಿ ಎಲ್ಲವೂ ಕಾದಂಬರಿಯಲ್ಲಿ ಚಾಕಚಕ್ಯತೆಯಿಂದ ಹಾಗೆ ಬೆಸೆದುಕೊಂಡಿವೆ.

ನಾನು ಎರಡು ಕಾದಂಬರಿಗಳಲ್ಲಿ ಒಟ್ಟಾರೆಯಾಗಿ ಕಂಡುಕೊಂಡ ಸಂಗತಿಗಳೆಂದರೆ ಕಾದಂಬರಿ ಸಾಮಾಜಿಕವಾಗಿರಲಿ, ಐತಿಹಾಸಿಕವಾಗಿರಲಿ ಎರಡರಲ್ಲೂ ಪಾತ್ರಗಳು ಜೀವಂತಿಕೆಯನ್ನು ಮರೆಯುತ್ತಿವೆ. ನಂಬಿಕೆ, ಆಚರಣೆ, ಸಂಪ್ರದಾಯ, ಸಂಸ್ಕಾರ ಇವೆಲ್ಲವುಗಳನ್ನು ಪಾಲಿಸಿಕೊಂಡು ಬರುವ ಅವರ ಬರಹದ ಶೈಲಿಯಿಂದಲೇ ಕಾದಂಬರಿಗಳು, ಮುರುಗಳುಗಾಡಿನ ಪ್ರದೇಶದಲ್ಲಿ ಚಿಮ್ಮುವ ಕಾರಂಜಿಗಳ ಹಾಗೆ ಸಂಪ್ರದಾಯ ಸಂಸ್ಕಾರ ಇವೆಲ್ಲವುಗಳನ್ನು ಪಾಲಿಸಿಕೊಂಡು ಬರುವ ಅವರ ಬರಹದ ಶೈಲಿಯಿಂದಲೇ ಕಾದಂಬರಿಗಳು ಮರುಳುಗಾಡಿನ ಪ್ರದೇಶದಲ್ಲಿ ಚಿಮ್ಮುವ ಕಾರಂಜಿಗಳ ಹಾಗೆ ಸೊಂಪಾಗಿ ರಚನೆಗೊಂಡಿವೆ. ಹೀಗಾಗಿಯೇ ಎಲ್ಲ ಕಾದಂಬರಿ ಕಾರಗಿರಿತಲೂ ತರಾಸು ವಿಭಿನ್ನವಾಗಿದ್ದಾರೆ.

**ಆಕರ ಗ್ರಂಥಗಳು**


1. ಮನೆಗೆ ಬಂದ ಮಹಾಲಕ್ಶ್ಮೀ
2. ಸಿಡಿಲಮೊಗ್ಗಿ ತರಾಸು